# ಭಕ್ತಿ



"ಕಾಯಿಕವಾಗಿಯೂ, ವಾಚಿಕವಾಗಿಯೂ, ಮಾನಸಿಕವಾಗಿಯೂ ಭಗವಂತನನ್ನು ಪೂಜಿಸುವುದಕ್ಕೆ **ಭಕ್ತಿ** ಎಂದು ಹೆಸರು. ಕಾಯಿಕವಾಗಿ—ಅಂದರೆ ಕೈಯ ಮೂಲಕ ಆತನ ಪೂಜೆ ಮತ್ತು ಸೇವೆ ಮಾಡುವುದು, ಪಾದಗಳ ಮೂಲಕ ತೀರ್ಥಯಾತ್ರೆ ಮಾಡುವುದು, ಕಿವಿಯಿಂದ ಆತನ ಚರಿತ್ರೆ ಮತ್ತು ನಾಮಗುಣ ಕೀರ್ತನೆ ಕೇಳುವುದು, ಕಣ್ಣಿನಿಂದ ಆತನ ವಿಗ್ರಹ ದರ್ಶನ ಮಾಡುವುದು. ಮಾನಸಿಕವಾಗಿ—ಅಂದರೆ ಸರ್ವದಾ ಆತನ ಧ್ಯಾನ ಮತ್ತು ಚಿಂತನೆ ಮಾಡುವುದು, ಆತನ ಲೀಲೆಯನ್ನು ಸ್ಮರಣ ಮನನ ಮಾಡುವುದು. ವಾಚಿಕವಾಗಿ—ಅಂದರೆ ಆತನ ಸ್ತೋತ್ರ ಸ್ತುತಿಗಳನ್ನು ಪಠಿಸುವುದು ಮತ್ತು ಆತನ ನಾಮಗುಣ ಕೀರ್ತನೆ ಮಾಡುವುದು."

"ಯಾರಿಗೆ ಸಮಯವೇ ಇಲ್ಲವೋ ಅವರು ಪ್ರಾತಃಕಾಲ ಸಾಯಂಕಾಲ ಕೈತಾಳ ಹಾಕುತ್ತಾ ನಾಮಜಪ ಮಾಡಲಿ."

"ಭಕ್ತನ 'ಅಹಂ' ಅಹಂಕಾರವನ್ನು ಉಂಟುಮಾಡುವುದಿಲ್ಲ; ಅಜ್ಞಾನವನ್ನು ಉಂಟು ಮಾಡುವುದಿಲ್ಲ; ಅದಕ್ಕೆ ಬದಲು ಭಗವಂತನ ಸಾಕ್ಷಾತ್ಕಾರವನ್ನು ದೊರಕಿಸಿಕೊಡುತ್ತದೆ."

"ನಿಷ್ಠೆ ಭಕ್ತಿಯನ್ನು ದೊರಕಿಸಿಕೊಡುತ್ತದೆ. ಭಕ್ತಿ ಪಕ್ವವಾದರೆ ಭಾವವಾಗಿ ಪರಿಣಮಿಸುತ್ತದೆ; ಭಾವ ಘನೀಭೂತವಾದಾಗ ಅದು ಮಹಾಭಾವವಾಗುತ್ತದೆ; ಕಟ್ಟಕಡೆಗೆ ಪ್ರೇಮವಾಗುತ್ತದೆ. ಪ್ರೇಮವನ್ನು ಒಂದು ಹಗ್ಗಕ್ಕೆ ಹೋಲಿಸಬಹುದು. ಪ್ರೇಮ ಉಂಟಾಯಿತು ಅಂದರೆ ಭಗವಂತ ಭಕ್ತನ ಕೈಯಲ್ಲಿ ಕಟ್ಟಿ ಬೀಳುತ್ತಾನೆ. ಮತ್ತೆ ಆತನ ಕೈಯಿಂದ ತಪ್ಪಿಸಿಕೊಳ್ಳಲಾರ."

"ಭಕ್ತನಿಗೆ ಭಗವಂತನ ಸಾಕಾರ ರೂಪವನ್ನು ನೋಡಲು, ಆತನೊಡನೆ ಮಾತುಕತೆಯಾಡಲು ಇಚ್ಛೆ. ಪ್ರಾಯಿಕವಾಗಿ ಆತ ಬ್ರಹ್ಮಜ್ಞಾನಕ್ಕಾಗಿ ಹಾತೊರೆಯುವುದಿಲ್ಲ. ಆದರೆ ಭಗವಂತ ಇಚ್ಛಾಮಯ. ಆತನಿಗೇನಾದರೂ ಖುಷಿ ಬಂದರೆ, ಭಕ್ತನನ್ನು ತನ್ನ ಸಕಲ ಐಶ್ವರ್ಯಕ್ಕೂ ಅಧಿಕಾರಿಯನ್ನಾಗಿ ಮಾಡಿಬಿಡುತ್ತಾನೆ. ಭಕ್ತಿಯನ್ನು ಕೊಡುತ್ತಾನೆ. ಜ್ಞಾನವನ್ನೂ ಕೊಡುತ್ತಾನೆ."

"ಭಕ್ತ ಪ್ರಾರ್ಥನೆ ಮಾಡುತ್ತಾನೆ: 'ಹೇ ಭಗವತಿ, ಕರ್ಮ ಕಂಡರೆ ನನಗೆ ಬಹಳ ಭಯ. ಅದರಲ್ಲಿ ಕಾಮನೆಯಿದೆ. ಅದನ್ನು ಮಾಡಿದರೆ ಫಲ ಅನುಭವಿಸಬೇಕಾಗುತ್ತದೆ. ಮತ್ತೇನೆಂದರೆ ಅನಾಸಕ್ತಿಯಿಂದ ಕೆಲಸಮಾಡುವುದು ಬಹಳ ಕಠಿಣ. ಸಕಾಮ ಕರ್ಮಮಾಡಿದರೆ ನಿನ್ನನ್ನು ನಿಜವಾಗಿಯೂ ಮರೆತುಬಿಡುತ್ತೇನೆ. ಆದ್ದರಿಂದ ಅವು ನನಗೆ ಬೇಕಾಗಿಲ್ಲ. ನಿನ್ನ ಸಾಕ್ಷಾತ್ಕಾರ ದೊರೆಯದವರೆಗೆ, ನನ್ನ ಕರ್ಮ ದಿನದಿನಕ್ಕೂ ಕಡಿಮೆಯಾಗುವ ಹಾಗೆ ಮಾಡು. ಆದರೆ ಯಾವ ಕರ್ಮಗಳನ್ನು ನಾನು ಮಾಡಲೇಬೇಕಾಗಿರುವುದೋ ಅವನ್ನು ಅನಾಸಕ್ತಿಯಿಂದ ಮಾಡುವ ಹಾಗೆ ಶಕ್ತಿಯನ್ನು ಕರುಣಿಸು. ಅವನ್ನು ಮಾಡುತ್ತಾ ಮಾಡುತ್ತಾ ಮುಂದುವರಿದ ಹಾಗೆಲ್ಲಾ ಭಕ್ತಿಯೂ ಬೆಳೆಯುವಂತೆ ಮಾಡು. ನಿನ್ನ ಸಾಕ್ಷಾತ್ಕಾರವನ್ನು ಮಾಡಿಕೊಳ್ಳದವರೆಗೆ ಹೊಸ ಕರ್ಮಗಳನ್ನು ಗಂಟು ಹಾಕಿಕೊಳ್ಳಲು ನನ್ನ ಮನಸ್ಸು ಪ್ರಯತ್ನಿಸದ ಹಾಗೆ ಮಾಡು. ಆದರೆ ನೀನು ಆದೇಶ ಮಾಡಿದಾಗ ಮಾತ್ರ ನಿನ್ನ ಕರ್ಮಗಳನ್ನು ಮಾಡುವೆನೇ ವಿನಾ, ಇಲ್ಲದಿದ್ದರೆ ಇಲ್ಲ.'

"ಆದರೆ ಕಾಟಾಚಾರದ ಭಕ್ತಿಯಿಂದ ಭಗವಂತನನ್ನು ಪಡೆಯಲಾಗುವುದಿಲ್ಲ. ಪ್ರೇಮಭಕ್ತಿಯಿಲ್ಲದೆ ಆತನ ಸಾಕ್ಷಾತ್ಕಾರ ಮಾಡಿಕೊಳ್ಳಲಾಗುವುದಿಲ್ಲ. ಪ್ರೇಮಭಕ್ತಿಗೆ ಇನ್ನೊಂದು ಹೆಸರು '**ರಾಗಭಕ್ತಿ**' ಅಂತ. ಪ್ರೇಮ, ಅನುರಾಗ ಇಲ್ಲದೆ ಭಗವಂತನ ಸಾಕ್ಷಾತ್ಕಾರ ದೊರೆಯದು. ಭಗವಂತನಲ್ಲಿ ಪ್ರೀತಿ ಉಂಟಾದ ಹೊರತು ಆತನನ್ನು ಸಾಕ್ಷಾತ್ಕಾರ ಮಾಡಿಕೊಳ್ಳಲಾಗುವುದಿಲ್ಲ."

"ಭಗವಂತನಲ್ಲಿ ಪ್ರೀತಿ ಉದಯವಾಗದವರೆಗೆ ಭಕ್ತಿ ಹಸಿಯದಾಗಿರುತ್ತದೆ. ಅದು ಉಂಟಾಗಿಬಿಟ್ಟಿತು ಎಂದರೆ, ಭಕ್ತಿ ಪಕ್ವಭಕ್ತಿಯಾಗಿ ಬಿಡುತ್ತದೆ."

"ಭಕ್ತಿಯ ಮೂಲಕವೇ ಆತನ ದರ್ಶನ ಪಡೆಯಬಹುದು. ಆದರೆ ಅದು **ಪಕ್ವಭಕ್ತಿ, ಪ್ರೇಮಭಕ್ತಿ**, ರಾಗಭಕ್ತಿ ಆಗಿರಬೇಕು. ಆ ಭಕ್ತಿ ಉಂಟಾಯಿತು ಎಂದರೆ ತಾಯಿ ಮಗುವನ್ನು ಪ್ರೀತಿಸುವಂತೆ, ಮಗು ತಾಯಿಯನ್ನು ಪ್ರೀತಿಸುವಂತೆ, ಸತಿ ಪತಿಯನ್ನು ಪ್ರೀತಿಸುವಂತೆ, ಭಕ್ತ ಭಗವಂತನನ್ನು ಪ್ರೀತಿಸುತ್ತಾನೆ."

*ಶ್ರೀರಾಮಕೃಷ್ಣ ವಚನವೇದ* ದಿಂದ